**ಓ ಎಸ್ ನಂ 31/2015**

**ಡಿ. ಡಬ್ಲ್ಯೂ ಃ 2**

**ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಜೆ ಎಂ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಮುನಿರತ್ನಮ್ಮ ನವರ ಪರಿಚಯ ಇರುತ್ತದ, ಈ ಕೇಸ್ ನ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಈ ದಾವೆಯನ್ನು ಭಾಗ ಕೇಳಿ ಹಾಕಿರುತ್ತಾರೆ. ಈ ದಾವೆಯನ್ನು ಹೂಡಿರುವ ವಾದಿ ಮತ್ತು ಪ್ರತಿವಾದಿ 1 ರಿಂದ 5 ರವರು ನನ್ನ ರಕ್ತ ಸಂಬಂಧಿಕರು ಎಂದರೆ ಸರಿ. ಈ ದಾವೆಯಲ್ಲಿ ಹಾಕಿರುವ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳೆಂದರೆ ಸರಿ. ನಾನು ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರ ಸತ್ಯವಾಗಿರುತ್ತದೆ. ನಾನು ಲಕ್ಷ್ಮಮ್ಮ ನವರ ಎಲ್ಲ ವಾರಸುದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. 2002 ರಲ್ಲಿ ದಾವಾ ಸ್ವತ್ತುಗಳು ಭಾಗವಾಗಿದೆ ಎಂದರೆ ಗೊತ್ತಿಲ್ಲ. ಸ.ನಂ. 18/1 ಎಲಚುಗುಪ್ಪೆ -ರಾಂಪುರ ಪ್ರತಿವಾದಿ 1 (ಎ) ರವರ ಸ್ವತ್ತಾಗಿತ್ತು ಎಂದರೆ ಸರಿ. ಸದರಿ ಸ್ವತ್ತು ಬ್ಯಾಲಮ್ಮ ನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತನ್ನು 2004 ರಲ್ಲಿ ಪಿ ವಿ ನಾಗೇಶ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತು. ನಾನು ಸದರಿ ಮಾರಾಟ ಮಾಡಿರುವ ಕ್ರಯಪತ್ರದ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿ ಪಿ 12 ಎಂದು ಗುರುತಿಸಲಾಯಿತು.

2004 ರಲ್ಲಿ ನಿ ಪಿ 12 ಸದರಿ ಸ್ವತ್ತನ್ನು ಮಾರಾಟ ಮಾಡುವಾಗ ಸದರಿ ಸ್ವತ್ತು ಬ್ಯಾಲಮ್ಮ ನವರ ಸ್ವತ್ತಾಗಿದ್ದರೂ ಒಟ್ಟು ಕುಟುಂಬದ ಎಲ್ಲ ಸದಸ್ಯರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿ ಪಿ 12 ರಲ್ಲಿ ಮಾರಾಟ ಮಾಡಿದ ಹಣ ಬ್ಯಾಲಮ್ಮ ನವರು ನಮಗೆ ಕೊಟ್ಟಿರುವುದಿಲ್ಲ. ಬ್ಯಾಲಮ್ಮ ನವರು ಮುನಿರತ್ನಮ್ಮ ನವರಿಗೂ ನಿ ಪಿ 12 ರಂತೆ ಮಾರಾಟ ಮಾಡಿದ ಹಣವನ್ನು ಕೊಟ್ಟಿರುವುದಿಲ್ಲ. ಸದರಿ ನಿ ಪಿ 12 ರಲ್ಲಿ ಮಾರಾಟ ಮಾಡಿ ಬಂದ ಹಣವನ್ನು ನನ್ನ ಅಜ್ಜಿ ಬೈಲಮ್ಮ, ನನ್ನ ತಾತ ಲೇಟ್ ರಾಮಯ್ಯ, ಕೆಂಚರಾಮಯ್ಯ, ಮುನಿಯಪ್ಪ ಮತ್ತು ಲಕ್ಷ್ಮಣಪ್ಪ ನವರು ಹಂಚಿಕೊಂಡಿರುತ್ತಾರೆ. ಈ ಸ್ವತ್ತನ್ನು ಹೊರತುಪಡಿಸಿದರೆ ನಮಗೆ ಬೇರೆ ಯಾವುದೇ ಭಾಗವನ್ನು ನೀಡಿರುವುದಿಲ್ಲ ಎಂದರೆ ಸರಿ.

ಈ ಸ್ವತ್ತಿನಲ್ಲಿ ಯಾವುದೇ ಭಾಗ ನೀಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಮುನಿರತ್ನಮ್ಮ ನವರಿಗೆ ಭಾಗ ಇರುತ್ತದೆ ಎಂದರೆ ಸರಿ. ಪ್ರಸ್ತುತ ದಾವೆ ಡಿಕ್ರಿಯಾಗಿರುವುದರಿಂದ ನನಗೆ ಏನು ತೊಂದರೆ ಇರುವುದಿಲ್ಲ. ನಾನು ಒಟ್ಟು ಕುಟುಂಬದಲ್ಲಿ ಈಗಲೂ ಚೆನ್ನಾಗಿ ಇರುತ್ತೇನೆ.

ದಾವಾ ಸ್ವತ್ತು ಈ ದಿನವೂ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ.

**ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**